

بسم اللهِ الرّحمٰن الرّحيم

# ಪ್ರಾರ್ಥನೆಯೇ ನಮ್ಮ ಆಯುಧ: ಜಮಾಅತಿನ ಸಂಕಷ್ಟಗಳ ನಿವಾರಣೆಗಾಗಿಯೂ ಶತ್ರುಗಳಿಗೆ ಮಾರ್ಗದರ್ಶನ ಲಭಿಸಲಿಕ್ಕಾಗಿಯೂ ಪ್ರಾರ್ಥಿಸಿರಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **08-08-14** ರಂದು ನೀಡಿದ **ಜುಮುಅ ಖುತುಬದ ಸಾರಾಂಶ**)

ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹಾ ತಿಲಾವತ್ ಮಾಡಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಪವಿತ್ರ ಖುರ್‌ಆನಿನ ಈ ಕೆಳಗಿನ ವಚನ ತಿಲಾವತ್ ಮಾಡಿದರು:

أَمَّنْ يُجِيبُ الْمُضطَرَّ إِذَا دَعَاهُ وَيَكْشِفُ السُّوءَ وَيَجْعَلُكُمْ خُلَفَاءَ الأَرْضِ أَءِلَهٌ مَعَ اللَّهِ قَلِيلاً مَا تَذَكَّرُونَ

*ಅಮ್ಮನ್ ಯುಜೀಬುಲ್ ಮುಝ್‌ತರ್ರ ಇಝಾ ದಆಹು ವ ಯಕ್‌ಶಿಫುಸ್ಸೂಅ ವ ಯಜ್‌ಅಲುಕುಮ್ ಖುಲಫಾಅಲ್ ಅರ್‌ಝ್. ಅ ಇಲಾಹುನ್ ಮಅಲ್ಲಾಹ್. ಖಲೀಲನ್ ಮಾ ತಝಕ್ಕರೂನ್*

**"ಸಂಕಷ್ಟಕ್ಕೆ ಗುರಿಯಾದವನು ಪ್ರಾರ್ಥಿಸುವಾಗ ಅವನ ಪ್ರಾರ್ಥನೆಗೆ ಉತ್ತರ ನೀಡುವವನೂ ಕ್ಲೇಶಗಳನ್ನು ಹೋಗಲಾಡಿಸುವವನೂ ನಿಮ್ಮನ್ನು ಭೂಮಿಯಲ್ಲಿ ಉತ್ತರಾಧಿಕಾರಿಗಳನ್ನಾಗಿ ಮಾಡುವವನೂ ಯಾರು? ಅಲ್ಲಾಹನ ಜೊತೆಯಲ್ಲಿ ಬೇರೆ ದೇವನಿದ್ದಾನೆಯೇ? ನೀವು ಉಪದೇಶಕ್ಕೆ ಕಿವಿಗೊಡುವುದೇ ಇಲ್ಲ."** (ಪವಿತ್ರ ಖುರ್‌ಆನ್ 27: 63).

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಪದೇ ಪದೇ ತನ್ನ ಜಮಾಅತಿನವರೊಂದಿಗೆ ಒತ್ತಿ ಹೇಳುತ್ತಾ ಇದ್ದುದು ನೀವು ದುಆ ಬಗ್ಗೆ ಬಹಳ ಹೆಚ್ಚು ಶ್ರದ್ಧೆ ನೀಡಬೇಕೆಂದಾಗಿದೆ. ಏಕೆಂದರೆ ಜಮಾಅತಿನ ಅಭಿವೃದ್ಧಿ, ಜಮಾಅತಿನ ವಿಜಯ ಮತ್ತು ಶತ್ರುಗಳ ಗೂಢ ತಂತ್ರಗಳಿಂದಲೂ ಅವರ ದುಷ್ಕೃತ್ಯಗಳಿಂದಲೂ ಜಮಾಅತ್‌ಗೆ ಸಂರಕ್ಷಣೆ ಲಭಿಸುವುದು ದುಆದ ಮೂಲಕವೇ ಆಗಿರುತ್ತದೆ. ನಾವು ಜಯಶಾಲಿಗಳಾಗಲು ನಮಗಿರುವ ಆಯುಧ ದುಆ ಮಾತ್ರವಾಗಿದೆ ಎಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ನಾವು ದುಆಗಳ ಫಲಸ್ವರೂಪವಾಗಿಯೇ ಪ್ರತಿಯೊಂದು ಅಭಿವೃದ್ಧಿಯನ್ನು ಕಾಣಲಿಕ್ಕಿರುವುದರಿಂದ ಮತ್ತು ಪ್ರತಿಯೊಬ್ಬ ಶತ್ರುವನ್ನು ದುಆಗಳ ಮೂಲಕವೇ ಸೋಲಿಸಲಿಕ್ಕಿರುವುದರಿಂದ ದುಆಗಳ ಮಹತ್ವವನ್ನು ನಾವು ನಮ್ಮ ಮುಂದಿರಿಸಿ, ದುಆಗಳ ಬಗ್ಗೆ ಎಷ್ಟೊಂದು ಶ್ರದ್ಧೆ ನೀಡಬೇಕು ಹಾಗೂ ನಾವು ಈ ಉದ್ದೇಶವನ್ನು ಈಡೇರಿಸಲು ಅದರ ಕಡೆಗೆ ಎಷ್ಟು ಶ್ರದ್ಧೆ ನೀಡುತ್ತಿದ್ದೇವೆ ಎಂಬುದರ ಬಗ್ಗೆ ನಮ್ಮಲ್ಲಿ ಪ್ರತಿಯೊಬ್ಬ ತನ್ನ ಸ್ಥಿತಿಯನ್ನು ನೋಡಿಕೊಂಡು ಅಂದಾಜು ಮಾಡಬಹುದಾಗಿದೆ. ಸಾಮಾನ್ಯವಾಗಿ ನಾವು ದುಆಗಳ ಕಡೆಗೆ, ರಮಝಾನ್ ತಿಂಗಳಲ್ಲಿ ನೀಡಿದಷ್ಟು ಹೆಚ್ಚಿನ ಮಟ್ಟದ ಶ್ರದ್ಧೆ ರಮಝಾನಿನ ನಂತರ ನೀಡುವುದಿಲ್ಲ. ಈಗ ಲೋಕದ ಸ್ಥಿತಿ ಮತ್ತು ಮುಸ್ಲಿಮ್ ಸಮುದಾಯದ ಸ್ಥಿತಿ, ವಿಶಿಷ್ಟವಾಗಿ ಪೆಲೆಸ್ತೀನ್ ಜನತೆಯ ಮೇಲೆ ಇಸ್ರಾಯೇಲ್‌ನ ದೌರ್ಜನ್ಯಕಾರಕ ನಿರಂತರ ಆಕ್ರಮಣ ಆತಂಕದಾಯಕವಾಗಿದೆ. ನಿನ್ನೆಯ ತನಕ ತಾತ್ಕಾಲಿಕ ಯುದ್ಧ ವಿರಾಮ ಘೋಷಿಸಲಾಗಿತ್ತು. ಇಂದು ಪುನಃ ಯುದ್ಧ ವಿರಾಮ ಕೊನೆಗೊಂಡಿದೆ ಎಂದು ತಿಳಿದು ಬಂದಿದೆ. ಈ ಯುದ್ಧ ವಿರಾಮ ಶಾಶ್ವತವಾಗುವಂತೆ ಅಲ್ಲಾಹನು ಮಾಡಲಿ ಮತ್ತು ದೌರ್ಜನ್ಯ ಕೊನೆಗೊಳ್ಳುವಂತೆ ಮಾಡಲಿ ಎಂದು ಪ್ರಾರ್ಥಿಸುವ. ಇನ್ನೊಂದೆಡೆ ಮುಸ್ಲಿಮರು ಒಬ್ಬರಿನ್ನೊಬ್ಬರ ಮೇಲೆ ದೌರ್ಜನ್ಯ ಮಾಡುವುದು, ಕತ್ತು ಕಡಿಯುವುದು, ಕೊಲೆ ಕೊಳ್ಳೆ ನಡೆಸುವುದು ಮೊದಲಾದವುಗಳು ಸಹ ಹೆಚ್ಚಾಗುತ್ತಾ ಬರುತ್ತಿವೆ. ಅದೂ ಅಲ್ಲದೆ ಕಲಿಮ ಉಚ್ಚರಿಸುವ ಈ ಜನರು ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಹೆಸರಿನಲ್ಲಿ ಅಹ್ಮದಿಯರ ಮೇಲೆ ಸಹ ನಿರಂತರ ದೌರ್ಜನ್ಯ ಮಾಡುತ್ತಿದ್ದಾರೆ. ಈ ದೌರ್ಜನ್ಯವನ್ನು ತೀವ್ರವಾಗಿ ಮುಂದುವರಿಸುತ್ತಾ ಇರಲು ಅವರು ನೆವನಗಳನ್ನು ಹುಡುಕುತ್ತಾ ಇರುತ್ತಾರೆ. ಮತ್ತು ಅದರ ಬಗ್ಗೆ ಹೇಳಿಕೆಗಳನ್ನು ನೀಡುತ್ತಾ ಇರುತ್ತಾರೆ. ದೌರ್ಜನ್ಯವನ್ನು ಪ್ರತಿಯೊಂದು ಹಂತದಲ್ಲೂ ಪ್ರತಿಯೊಂದು ಸಂದರ್ಭದಲ್ಲೂ ಮುಂದುವರಿಸುವುದು ಪಾಕಿಸ್ತಾನದಲ್ಲಿ ಮುಲ್ಲಾಗಳ ಪ್ರಭಾವಕ್ಕೊಳಗಾದ ಅಹ್ಮದಿಯೇತರರ ಪೈಕಿ ಬಹು ಸಂಖ್ಯಾತ ಜನರ ಸ್ವಭಾವ ಗುಣವಾಗಿ ಪರಿಣಮಿಸಿದೆ. ಅವರು ತಮ್ಮ ನಂತರದ ಪೀಳಿಗೆಗೂ ಈ ವಿಷವನ್ನು ಕುಡಿಸುತ್ತಿದ್ದಾರೆ. ಅವರು ತಮ್ಮ ಮಕ್ಕಳ ಮೆದುಳುಗಳನ್ನು ಈ ವಿಷದಿಂದ ತುಂಬಿಸುತ್ತಾರೆ. ಅವರ ಮಕ್ಕಳ ಬಾಯಿಗಳಿಂದಲೂ ಈ ಕೆಟ್ಟ ಮಾತುಗಳು ಹೊರಡುತ್ತಿವೆ. ಆದರೆ ಆ ಮಕ್ಕಳಿಗೆ ಧರ್ಮ ಏನೆಂದಾಗಲಿ, ಶತ್ರುತ್ವ ಏನೆಂದಾಗಲಿ ತಿಳಿದಿರುವುದಿಲ್ಲ. ಅಹ್ಮದಿಯರು ಕಾಫಿರ್‌ಗಳು ಅವರನ್ನು ಕೊಲ್ಲುವುದು ಧರ್ಮಬದ್ಧ ಎಂದು ಆ ಮಕ್ಕಳಿಗೆ ಇವರು ಕಲಿಸುತ್ತಾರೆ. ಆದುದರಿಂದ ಇಂತಹ ಪರೀಕ್ಷೆಯ ಕಾಲಘಟ್ಟದಲ್ಲಿ ನಾವು ಮೊದಲಿಗಿಂತಲೂ ಹೆಚ್ಚಾಗಿ ಅಲ್ಲಾಹನ ಕಡೆಗೆ ಬಾಗುವ ಆವಶ್ಯಕತೆಯಿದೆ. ಆದುದರಿಂದ ನೀವು ನಿಮ್ಮ ದುಆಗಳು ಕಡಿಮೆ ಆಗದಂತೆ ಶ್ರದ್ಧೆವಹಿಸಿರಿ. ಅಹ್ಮದಿಯೇತರ ಮುಸ್ಲಿಮರು ಪರಸ್ಪರ ದೌರ್ಜನ್ಯಗಳಿಗೆ ದೌರ್ಜನ್ಯದ ಮೂಲಕವೇ ಉತ್ತರ ನೀಡಿ ಲೆಕ್ಕಾಚಾರ ಸರಿಪಡಿಸಿಕೊಳ್ಳುತ್ತಾರೆ. ಆದರೆ ನಾವು ನಮ್ಮ ಮೇಲೆ ಮಾಡಲಾಗುವ ದೌರ್ಜನ್ಯಕ್ಕೆ ಉತ್ತರ ಅಲ್ಲಾಹನ ಮುಂದೆ ಗೋಳಿಟ್ಟು ಪ್ರಾರ್ಥಿಸುವ ಮೂಲಕ ನೀಡಬೇಕಾಗಿದೆ. ಅಲ್ಲಾಹನ ಮುಂದೆ ಅತ್ತುಕೊಂಡು ದುಆ ಮಾಡುತ್ತಾ ನಮ್ಮ ಪ್ರತಿಕ್ರಿಯೆ ನೀಡಬೇಕಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನ ಒಂದು ಉರ್ದು ಪದ್ಯದಲ್ಲಿ ಹೀಗೆ ಹೇಳುತ್ತಾರೆ.

***ಅದುವ್ವ್ ಜಬ್ ಬಢ್‌ಗಯಾ ಶೋರೋ ಫುಗಾನ್ ಮೇ***

***ನಿಹಾಂ ಹಮ್ ಹೋಗಯೇ ಯಾರೇ ನಿಹಾಂ ಮೇ.***

**ಶತ್ರು ತನ್ನ ಶತ್ರುತ್ವದಲ್ಲಿ ಮಿತಿಮೀರಿದಾಗ**

## ನಾವು ನಮ್ಮ ಅದೃಶ್ಯ ಪ್ರಿಯನಲ್ಲಿ ತಲ್ಲೀನರಾದೆವು.

ನಾವು ಅದೃಶ್ಯ ಪ್ರಿಯನಲ್ಲಿ ಮುಳುಗಿ ಹೋಗುವ ಆವಶ್ಯಕತೆ ಇದೆ. ನಾವು ನಮ್ಮಲ್ಲಿ ಎಂತಹ ಸ್ಥಿತಿಯನ್ನುಂಟುಮಾಡುವ ಆವಶ್ಯಕತೆ ಇದೆ ಎಂದರೆ ಅದು ಅಲ್ಲಾಹನ ಸಿಂಹಾಸನದ ಪಾದಗಳನ್ನು ಕಂಪಿಸುವಂತೆ ಮಾಡುವಂತಿರಬೇಕು. ಏಕಾಗ್ರತೆಯಿಂದ ನಾವು ಒಂದೇ ವಿಷಯದ ಬಗ್ಗೆ ತೀವ್ರವಾಗಿ ಪ್ರಾರ್ಥಿಸಬೇಕಾಗಿದೆ. ಅವು ವಿವಿಧ ವಿಷಯಗಳಾಗಿ ಹಂಚಿಹೋಗಬಾರದು. ಪರೀಕ್ಷೆಯ ಈ ಕಾಲಘಟ್ಟ ಬೇಗನೆ ಕೊನೆಗೊಳ್ಳಬೇಕೆಂದು ನಮ್ಮ ಪೈಕಿ ಪ್ರತಿಯೊಬ್ಬನೂ ಇಚ್ಛಿಸಿ ಪ್ರಾರ್ಥಿಸಬೇಕು. ಶತ್ರುಗಳ ಕೆಡುಕುಗಳಿಂದ ಅಲ್ಲಾಹನು ನಮ್ಮನ್ನು ರಕ್ಷಿಸಲಿ ಎಂದು ಶ್ರದ್ಧಾಪೂರ್ವಕವಾಗಿಯೂ ಸಾಮೂಹಿಕವಾಗಿಯೂ ಪ್ರಾರ್ಥಿಸಬೇಕು. ಪಾಕಿಸ್ತಾನದ ಎಲ್ಲಾ ಅಹ್ಮದಿಯರು ಅವರು ಬಡವರಾಗಿರಲಿ ಶ್ರೀಮಂತರಾಗಿರಲಿ ಇದರ ಬಗ್ಗೆ ಹೆಚ್ಚಿನ ಶ್ರದ್ಧೆ ನೀಡಬೇಕು. ಪುರುಷರೂ ಮಹಿಳೆಯರೂ ಪ್ರಾರ್ಥನೆಗಳಲ್ಲಿ ನಿರತರಾಗಬೇಕು. ಯಾಕೆಂದರೆ ಅಹ್ಮದಿಯರ ಮೇಲೆ ಈಗ ಅತಿಹೆಚ್ಚು ಹಿಂಸಾಚಾರ ನಡೆಯುತ್ತಿರುವುದು ಪಾಕಿಸ್ತಾನದಲ್ಲಾಗಿದೆ. ಲೋಕದ ಇತರ ದೇಶಗಳಲ್ಲಿರುವ ಅಹ್ಮದಿಯರು ಸಹ ಇವರ ಬಗ್ಗೆ ಗಮನಿಸಿ ದುಆಗಳನ್ನು ಮಾಡುವ ಆವಶ್ಯಕತೆ ಇದೆ. ಏಕೆಂದರೆ ಅಹ್ಮದಿಯತ್ತಿನ ಜಯದೊಂದಿಗೆ ಲೋಕದ ಬಾಳ್ವಿಕೆ ಸಂಬಂಧ ಹೊಂದಿದೆ. ಮುಸ್ಲಿಮ್ ಸಮುದಾಯ ಅಲ್ಲಾಹನ ಅನುಗ್ರಹ ಗಳಿಸುವುದು ಸಹ ಅಹ್ಮದಿಯತ್ತಿನ ಜಯದೊಂದಿಗೆ ಜೋಡಿಸಲ್ಪಟ್ಟಿದೆ. ಅದೇರೀತಿ, ಇಂದಿನ ಈ ಎಲ್ಲಾ ಹಿಂಸಾಚಾರಗಳ ಪರ್ಯವಸಾನ ಸಹ ಇದರೊಂದಿಗೆ ಜೋಡಿಸಲ್ಪಟ್ಟಿದೆ.

ಫೆಲೆಸ್ತೀನಿನ ಜನರನ್ನು ದೌರ್ಜನ್ಯದಿಂದ ಮುಕ್ತರನ್ನಾಗಿ ಮಾಡುವುದಾಗಲಿ, ಮುಸ್ಲಿಮರನ್ನು ದೌರ್ಜನ್ಯಗಾರರಾದ ಅವರ ದೊರೆಗಳಿಂದ ಸ್ವತಂತ್ರರನ್ನಾಗಿ ಮಾಡುವುದಾಗಲಿ ಅಹ್ಮದಿಯರ ಪ್ರಾರ್ಥನೆಗಳ ಮೂಲಕ ಮಾತ್ರವೇ ಸಾಧ್ಯ. ಆದುದರಿಂದ ನಾವು ಪ್ರಾರ್ಥನೆಗಳನ್ನು ಮಾಡುವ ನಮ್ಮ ಕರ್ತವ್ಯವನ್ನು ಈಡೇರಿಸಬೇಕಾದ ಆವಶ್ಯಕತೆ ಇದೆ. ಈಗ ದೌರ್ಜನ್ಯದ ಬೀಸುಗಲ್ಲಿನಲ್ಲಿ ಅಹ್ಮದಿಯರು ಎಲ್ಲರಿಗಿಂತಲೂ ಹೆಚ್ಚಾಗಿ ಅರೆಯಲ್ಪಡುತ್ತಿದ್ದಾರೆ. ಆದುದರಿಂದ ನಮ್ಮ ನಿಷ್ಠಾವಂತ ಪ್ರಾರ್ಥನೆಗಳು ನಿರಂತರವಾಗಿ ಮುಂದುವರಿದುಕೊಂಡು ಅವುಗಳು ನಮ್ಮನ್ನು ದೌರ್ಜನ್ಯಗಳಿಂದ ಮುಕ್ತರನ್ನಾಗಿ ಮಾಡಿ ನಮಗೆ ಸ್ವಾತಂತ್ರ್ಯ ನೀಡುವುದು. ಮಾತ್ರವಲ್ಲ, ಮಾನವರೆಲ್ಲರನ್ನೂ ದೌರ್ಜನ್ಯಗಳಿಂದ ಬಿಡುಗಡೆಗೊಳಿಸುವಂತೆ ಮಾಡುವುದು. ನಾವು ನಮ್ಮ ಹೊಣೆಗಾರಿಕೆಗಳನ್ನು ಮನವರಿಕೆ ಮಾಡಿಕೊಳ್ಳುವ ಆವಶ್ಯಕತೆ ಇರುತ್ತದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ: "ಪರೀಕ್ಷೆಯ ಕಾಲಘಟ್ಟಗಳಲ್ಲಿಯೇ ದುಆಗಳ ಅದ್ಭುತಕರ ವೈಶಿಷ್ಟತೆಗಳು ಮತ್ತು ಪ್ರಭಾವಗಳು ಪ್ರಕಟವಾಗುತ್ತವೆ. ಸತ್ಯವೇನೆಂದರೆ ಪ್ರಾರ್ಥನೆಗಳು ಅಂಗೀಕರಿಸಲ್ಪಡುವ ಮೂಲಕವೇ ನಮ್ಮ ದೇವನು ಗುರುತಿಸಲ್ಪಡುತ್ತಾನೆ."

ನಾನು ಮೊದಲು ಹೇಳಿದ ಹಾಗೆ ಅಹ್ಮದಿಯರಿಗಿಂತ ಹೆಚ್ಚಾಗಿ ಯಾರು ದೌರ್ಜನ್ಯಗಳಿಗೆ ಪಾತ್ರರಾಗುತ್ತಿದ್ದಾರೆ? ಕೆಲವು ಮುಸ್ಲಿಮ್ ರಾಷ್ಟ್ರಗಳಲ್ಲಿ ಪ್ರತಿಯೊಂದು ದಿಕ್ಕುಗಳಿಂದಲೂ ದೌರ್ಜನ್ಯಗಳಿಗೆ ಗುರಿಯಾಗುವವರು ಅಹ್ಮದಿಯರಲ್ಲದೆ ಬೇರೆ ಯಾರು? ಈ ಮುಸ್ಲಿಮ್ ದೇಶಗಳ ಸಭ್ಯರಾದ ಜನರಲ್ಲಿ ಬಹುತೇಕ ಮಂದಿ ಅಥವಾ ಸಭ್ಯಮನೋಭಾವದ ಎಲ್ಲಾ ಜನರು ಹೇಗಿದ್ದಾರೆಂದರೆ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್ ರಹಿಮಹುಲ್ಲಾಹು ತಆಲಾ ಹೇಳುತ್ತಿದ್ದ ಹಾಗೆ ಅವರ ಸಭ್ಯತೆ ನಿಷ್ಕ್ರಿಯವಾಗಿಬಿಟ್ಟಿದೆ. ಇಂತಹ ಪರಿಸ್ಥಿತಿಯಲ್ಲಿ ಪ್ರಾರ್ಥನೆಗಳ ಮೂಲಕ ಅದ್ಭುತಕರವಾದ ಅನುಗ್ರಹಗಳನ್ನು ಗಳಿಸಲು ನಾವು ದುಆಗಳ ಬಗ್ಗೆ ವಿಶೇಷವಾಗಿ ಗಮನ ಹರಿಸಬೇಕಾಗಿದೆ.

ನಾನು ತಿಲಾವತ್ ಮಾಡಿದ ಪವಿತ್ರ ಖುರ್‌ಆನಿನ ವಚನಗಳಲ್ಲಿ ಅಲ್ಲಾಹನು "ನಾನು ಸಂಕಷ್ಟಪೀಡಿತರಾದ ಜನರ ಪ್ರಾರ್ಥನೆಗಳನ್ನು ಅಂಗೀಕರಿಸುತ್ತೇನೆ." ಎಂದು ಹೇಳಿರುವನು. ಪವಿತ್ರ ಖುರ್‌ಆನಿನಲ್ಲಿ ಬಳಸಲಾದ ಪದ **'ಮುಝ್‌ತರ್ರ್'** ಎಂದಾಗಿದೆ. ನಾಲ್ಕು ದಿಕ್ಕುಗಳಿಂದಲೂ ಕಷ್ಟಗಳನ್ನೂ ಪರೀಕ್ಷೆಗಳನ್ನೂ ಎದುರಿಸುತ್ತಾ ಇರುವವನೇ **'ಮುಝ್‌ತರ್ರ್'** ಆಗಿರುತ್ತಾನೆ. ಅವನಿಗೆ ತಾನು ಜಯಗಳಿಸುವ ಬಗ್ಗೆ ಲೌಕಿಕವಾದ ಯಾವ ಮಾರ್ಗವೂ ಕಾಣಿಸುವುದಿಲ್ಲ. ಅವನಿಗೆ ಕೇವಲ ಒಂದು ಮಾರ್ಗ ಮಾತ್ರ ತೆರೆದಿರುತ್ತದೆ. ಅದು ಅಲ್ಲಾಹನ ಕಡೆಗೆ ಹೋಗುವ ಮಾರ್ಗವಾಗಿರುತ್ತದೆ. 'ಅಂತಹ ಜನರಿಗೆ ಲೋಕದ ಎಲ್ಲಾ ಮಾರ್ಗಗಳು ಮುಚ್ಚಲ್ಪಟ್ಟಿರುತ್ತವೆ. ಅವರಿಗೆ ನನ್ನನ್ನು ಸಮೀಪಿಸುವ ಮಾರ್ಗ ಮಾತ್ರ ತೆರೆದಿರುತ್ತದೆ' ಎಂದು ಅಲ್ಲಾಹನು ಹೇಳುತ್ತಾನೆ. ಒಬ್ಬನು ಅಲ್ಲಾಹನ ಆಶ್ರಯದ ಹೊರತು ಬೇರೆ ಯಾವ ಆಶ್ರಯವೂ ದೊರಕದವನಾಗುವಾಗ ಅಲ್ಲಾಹನ ಹೊರತು ಬೇರೆ ಯಾವ ಆಶ್ರಯದಾತನೂ ತನಗಿಲ್ಲವೆಂದು ಅವನು ಮನವರಿಕೆ ಮಾಡಿಕೊಳ್ಳುವಾಗ ಅವನೇ ನಿಜವಾದ **ಮುಝ್‌ತರ್ರ್** ಆಗಿರುತ್ತಾನೆ. ಅವನ ಪ್ರಾರ್ಥನೆಗಳು ಅದ್ಭುತಗಳನ್ನು ತೋರಿಸುವವುಗಳಾಗುತ್ತವೆ. ನಮ್ಮ ಪ್ರಾರ್ಥನೆಗಳು ಅಂಗೀಕರಿಸಲ್ಪಡುವಂತಾಗಲು, ಎಲ್ಲಾ ವಿಧಗಳ ಸಂಕಷ್ಟಗಳಲ್ಲಿ ಅಲ್ಲಾಹನೇ ಸಹಾಯಕನಾಗಿರುತ್ತಾನೆ, ಹಾಗೂ ನಮಗೆ ಬೆಳಕಿನ ಕಿರಣಗಳನ್ನು ಕಾಣಿಸುವಂತೆ ಮಾಡುವ ಬೇರೆ ಯಾವುದೇ ಮಾರ್ಗವಿಲ್ಲ ಎಂಬುದಾಗಿ ನಾವು ದೃಢ ವಿಶ್ವಾಸ ಹೊಂದಿದವರಾಗಬೇಕು. ಸಂಕಷ್ಟಗಳಿಗೆ ತುತ್ತಾಗುವಾಗ ಅಲ್ಲಾಹನನ್ನು ಬೇಡಿಕೊಂಡರೆ ಅಲ್ಲಾಹನು ಸಹಾಯಮಾಡಲು ಓಡಿ ಬರುತ್ತಾನೆ. ಅವನು ತನ್ನ ವಾಗ್ದಾನಗಳ ಪ್ರಕಾರ ಅವರ ಸಂಕಷ್ಟಗಳನ್ನು ನಿವಾರಿಸುತ್ತಾನೆ. ಅವರ ಸಂಕಷ್ಟಗಳು ಗಾಳಿಯಲ್ಲಿ ಹಾರಿ ಹೋಗುತ್ತವೆ. ವೈಯಕ್ತಿಕ ಕಷ್ಟಗಳಾಗಿದ್ದರೂ ಜಮಾಅತಿಗೆ ಸಂಬಂಧಿಸಿದ ಕಷ್ಟಗಳಾಗಿದ್ದರೂ ಅವೆಲ್ಲಾ ನಿವಾರಿಸಲ್ಪಡುತ್ತವೆ. ಅಲ್ಲಾಹನು ಕೇವಲ ಕಷ್ಟಗಳನ್ನು ನಿವಾರಿಸುವವನು ಮಾತ್ರವಲ್ಲ. ಅವನು ಅನುಗ್ರಹದಾಯಕನೂ ಆಗಿದ್ದಾನೆ. ಅಲ್ಲಾಹನು ಅನುಗ್ರಹಗಳನ್ನು ನೀಡುವಾಗ ಅವನ ಅನುಗ್ರಹಗಳು ಸೀಮಾತೀತವಾಗುತ್ತವೆ. ನಾನು ತಿಲಾವತ್ ಮಾಡಿದ ವಚನದಲ್ಲಿ ಅಲ್ಲಾಹನು ಅವರನ್ನು ಭೂಮಿಯ ವಾರೀಸುದಾರರನ್ನಾಗಿ ಮಾಡುವುದಾಗಿ ವಾಗ್ದಾನ ಮಾಡಿದ್ದಾನೆ. ಅತಿದೊಡ್ಡ ದೌರ್ಜನ್ಯಕಾರರನ್ನೂ ಮಹಾ ಬಲಶಾಲಿಗಳಾದ ದಬ್ಬಾಳಿಕೆಕಾರರನ್ನೂ ಅಲ್ಲಾಹನು ಕಿತ್ತೆಸೆದು ಅವರ ಸ್ಥಾನದಲ್ಲಿ ದೌರ್ಜನ್ಯ ಪೀಡಿತರೂ ಬಲಹೀನರೂ ಆಗಿ ಕಾಣಿಸುತ್ತಿದ್ದವರನ್ನು ಅಲ್ಲಾಹನು ಕುಳ್ಳಿರಿಸುತ್ತಾನೆ. ಅಲ್ಲಾಹನು ವ್ಯಕ್ತಿಗಳ ಕಷ್ಟಗಳನ್ನು ನಿವಾರಿಸುತ್ತಾನಲ್ಲದೆ. ಸಾಮುದಾಯಿಕವಾಗಿ ಕಷ್ಟಕ್ಕೊಳಗಾದವರನ್ನೂ ಅವನು ಕಷ್ಟದಿಂದ ಮುಕ್ತರನ್ನಾಗಿ ಮಾಡುತ್ತಾನೆ. ಇದೇ ವಿಷಯವನ್ನು ಅಲ್ಲಾಹನು ಪವಿತ್ರ ಖುರ್‌ಆನಿನ ಬೇರೆ

ವಚನಗಳಲ್ಲಿ ಸಹ ವಿವರಿಸಿದ್ದಾನೆ. ಹಿಂದಿನ ಕಾಲದಲ್ಲಿ ಸಂದೇಶವಾಹಕರ ವಿರುದ್ಧ ಮತ್ತು ಅವರ ಅನುಯಾಯಿಗಳ ವಿರುದ್ಧ ಆ ಕಾಲದ ಜನರು ದೌರ್ಜನ್ಯದಿಂದ ವರ್ತಿಸಿದಾಗ, "ಅವರನ್ನು ನಾನು ನಾಶಮಾಡಿದೆ. ಅವರ ಸ್ಥಾನದಲ್ಲಿ ದೌರ್ಜನ್ಯ ಪೀಡಿತರನ್ನು ಇರಿಸಿದೆ" ಎಂದು ಅಲ್ಲಾಹನು ಹೇಳಿರುತ್ತಾನೆ. ಹಿಂದಿನ ಕಾಲದಲ್ಲಿ ಅನೇಕ ದೊಡ್ಡ ದೊಡ್ಡ ದೌರ್ಜನ್ಯಗಾರರೂ ಬಹಳ ಸಂಪತ್ತನ್ನು ಹೊಂದಿದವರೂ ಅತಿರಥ ಮಹಾರಥರಾದ ರಾಜ ಮಹಾರಾಜರುಗಳೂ ಹೇಳ ಹೆಸರಿಲ್ಲದಂತೆ ಅಳಿಸಲ್ಪಟ್ಟರು. ಇಂದಿನ ಕಾಲದಲ್ಲಿ ಸಹ ಈ ನಿಯಮ ಜಾರಿಯಲ್ಲಿದೆ. ಹಿಂದಿನ ಕಾಲದಲ್ಲಿ ಅದು ಜಾರಿಗೊಂಡಂತೆ ಈ ಕಾಲದಲ್ಲೂ ಅದು ಜಾರಿಗೊಳ್ಳುವುದು.

ಅಲ್ಲಾಹನು ದೌರ್ಜನ್ಯಗಾರರನ್ನು ನಾಶಮಾಡುತ್ತಾನೆ. ಆದರೆ ದೌರ್ಜನ್ಯ ಪೀಡಿತರಾಗಿ ಸಂಕಷ್ಟಕ್ಕೆ ಪಾತ್ರರಾದ ಸತ್ಯ ವಿಶ್ವಾಸಿಗಳು **'ಮತಾ ನಸ್‌ರುಲ್ಲಾಹ್'** ಅಲ್ಲಾಹನ ಸಹಾಯ ಯಾವಾಗ? ಎಂದು ಅಳುತ್ತಾ ಪ್ರಾರ್ಥಿಸುವಾಗ ಅಲ್ಲಾಹನ ಕರುಣೆ ಉಕ್ಕಿ ಹೊರಹೊಮ್ಮುತ್ತದೆ. ಮತ್ತು ದೌರ್ಜನ್ಯಗಾರರು ಬೇಗನೆ ನಾಶವಾಗುತ್ತಾರೆ.

"ನಾವು ಬಹುಸಂಖ್ಯಾತರಾಗಿದ್ದೇವೆ ಮತ್ತು ಶಕ್ತಿ ಶಾಲಿಗಳಾಗಿದ್ದೇವೆ" ಎಂಬ ಅಹಂಕಾರದಿಂದ ಈ ಜನರು ದೌರ್ಜನ್ಯ ಮಾಡಲು ಮುಂದಾಗುತ್ತಾರೆ. ಅಲ್ಲಾಹನು ಅವರಿಗೆ ವಿವೇಕ ನೀಡಲಿ ಎಂದು ಪ್ರಾರ್ಥಿಸುವ. ಇಲ್ಲವಾದರೆ, ಅವರ ಶಕ್ತಿ ಮತ್ತು ಅವರ ಬಹುಸಂಖ್ಯೆಯೇ ಅವರಿಗೆ ನಾಶಕರವಾಗಿ ಪರಿಣಮಿಸಲಿದೆ.

ಆದುದರಿಂದ, ನಾವು ನಮ್ಮ ವೈಯಕ್ತಿಕ ಕಷ್ಟಗಳ ನಿವಾರಣೆಗೋಸ್ಕರ ಪ್ರಾರ್ಥಿಸುವ ಹಾಗೆಯೇ ನಾವು ಅತ್ಯಂತ ನಿಷ್ಠೆಯಿಂದಲೂ ಶ್ರದ್ಧೆಯಿಂದಲೂ ಜಮಾಅತಿನ ಕಷ್ಟಗಳು ನಿವಾರಣೆಯಾಗಲು ಸಹ ಪ್ರಾರ್ಥಿಸಬೇಕಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ್ದಾರೆ: "ದುಆಗಳು ಬಹಳ ಹೆಚ್ಚು ಹೆಚ್ಚಾಗಿ ಮತ್ತು ಪದೇ ಪದೇ ಮಾಡಬೇಕೆಂಬುದು ದುಆಗಳ ಶರತ್ತು ಆಗಿದೆ."

ಆದುದರಿಂದ, 'ನಾವು ರಮಝಾನ್ ತಿಂಗಳಲ್ಲಿ ಬಹಳಷ್ಟು ಪ್ರಾರ್ಥನೆಗಳನ್ನು ಮಾಡಿದ್ದೇವೆ ಅವುಗಳು ಸಾಕಷ್ಟಾಗಿವೆ' ಎಂದು ನಾವು ಯೋಚಿಸಬಾರದು. ಆ ದುಆಗಳು ಸಾಕಾಗಲಾರವು ಎಂದು ನಮಗೆ ಸ್ಪಷ್ಟವಾಗಿ ಮನವರಿಕೆ ಆಗಬೇಕು. ನಾವು ನಿರಂತರವಾಗಿ ದುಆಗಳನ್ನು ಮಾಡುತ್ತಾ ಇರಬೇಕಾದುದು ಅನಿವಾರ್ಯವಾಗಿದೆ. ಮನುಷ್ಯನಿಗೆ ನಿರಂತರವಾಗಿ ಪ್ರಾರ್ಥನೆ ಮಾಡುವ ಆವಶ್ಯಕತೆಯಿದೆ. ಅಲ್ಲಾಹನೊಂದಿಗೆ ನಮ್ಮ ಸಂಬಂಧದಲ್ಲಿ ಯಾವುದೇ ಕೊರತೆ ಉಂಟಾಗಬಾರದು. ಅಲ್ಲಾಹನು ನಮಗೆ ಬಹಿರಂಗವಾದ ವಿಜಯವನ್ನು ದಯಪಾಲಿಸಿದರೂ ಸಹ ಆಗಲೂ ನಾವು ಭಯಭಕ್ತಿಯಿಂದ ಅಲ್ಲಾಹನ ಅನುಗ್ರಹಗಳನ್ನು ನೆನೆದು ಅದರ ಸ್ಥಿರತೆಗಾಗಿ ಮತ್ತೂ ಹೆಚ್ಚಿನ ಪ್ರಾರ್ಥನೆಗಳನ್ನು ಮಾಡಬೇಕಾಗುತ್ತದೆ. ಕಷ್ಟಕಾಲದಲ್ಲಿ ನಮಗೆ ಅಲ್ಲಾಹನ ಆವಶ್ಯಕತೆ ಇರುವ ಹಾಗೆಯೇ ಸುಖದ ಕಾಲದಲ್ಲಿಯೂ ಅವನ ಆವಶ್ಯಕತೆ ಇರುತ್ತದೆ. ಸತ್ಯ ವಿಶ್ವಾಸಿ ಎಂದೂ ಸ್ವಾರ್ಥಿ ಆಗಲಾರ. ತಾತ್ಕಾಲಿಕವಾಗಿ ಮಾಡುವ ಮತ್ತು ಒಮ್ಮೊಮ್ಮೆ ಉತ್ಸಾಹದಿಂದ ಮಾಡುವ ಪ್ರಾರ್ಥನೆ ಸಾಕೆಂದು ಸತ್ಯ ವಿಶ್ವಾಸಿ ಎಂದಿಗೂ ಭಾವಿಸಲಾರ. ಎಲ್ಲಾ ಸಮಯಗಳಲ್ಲೂ ಸತ್ಯ ವಿಶ್ವಾಸಿಗೆ ಅಲ್ಲಾಹನೊಂದಿಗೆ ಸಂಬಂಧವಿರುತ್ತದೆ. ಅಂತಹ ಸಂಬಂಧ ಇರಬೇಕಾದುದೇ ಆಗಿದೆ. ಸತ್ಯ ವಿಶ್ವಾಸಿ ಅಲ್ಲಾಹನೊಂದಿಗೆ ಹೊಂದಿರುವ ಈ ಸಂಬಂಧದ ಕಾರಣದಿಂದ ಸಾಮಾನ್ಯ ಪರಿಸ್ಥಿತಿಗಳಲ್ಲಿ ಸಹ ಪ್ರಾರ್ಥನೆಗಳು ಅಂಗೀಕರಿಸಲ್ಪಡುವ ದೃಷ್ಟಾಂತಗಳನ್ನು ಅಲ್ಲಾಹನು ತೋರಿಸುತ್ತಾ ಇರುತ್ತಾನೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ನೆನಪಿಡಿರಿ, ಅಲ್ಲಾಹನ ಹೊರತು ಅನ್ಯರ ಕಡೆಗೆ ಬಾಗುವುದು ಅಲ್ಲಾಹನೊಂದಿಗೆ ಸಂಬಂಧವನ್ನು ವಿಚ್ಛೇಧಿಸುವುದಕ್ಕೆ ಸಮವಾಗಿದೆ. ಅಲ್ಲಾಹನೊಂದಿಗೆ ಸಂಬಂಧವನ್ನು ವಿಚ್ಛೇಧಿಸುವ ಬಗ್ಗೆ ಓರ್ವ ಸತ್ಯ ವಿಶ್ವಾಸಿ ಎಂದೂ ಯೋಚಿಸಲಾರ. ಆದರೆ ಕೆಲವು ಸಾರಿ ಬಲಹೀನತೆಗಳ ಕಾರಣ ಪ್ರಾರ್ಥನೆಗಳು ಕಡಿಮೆಯಾಗುತ್ತವೆ. ಲೌಕಿಕ ವ್ಯವಹಾರಗಳಲ್ಲಿ ಭೌತಿಕ ಸಾಮಾಗ್ರಿಗಳ ಕಡೆಗೆ ಗಮನ ಹೆಚ್ಚಾಗುತ್ತದೆ. ಅಥವಾ ದುಆಗಳನ್ನು ಸರಿಯಾಗಿ ಮಾಡುವುದಿಲ್ಲ. ಆದುದರಿಂದ ನಮ್ಮಲ್ಲಿ ಪ್ರತಿಯೊಬ್ಬನೂ ತನ್ನ ಸ್ಥಿತಿಯ ಬಗ್ಗೆ ಪರಿಶೀಲಿಸುತ್ತಾ ಇರಬೇಕು. ನಾವು ನಮ್ಮ ಸಮಸ್ಯೆಗಳ ಬಗ್ಗೆಯೇ ತಲ್ಲೀನರಾಗಿ ದುಆ ಮಾಡುವ ಬಗ್ಗೆ ಗಮನ ಕೊಡದಿರುವವರಾಗಬಾರದು. ಜಮಾಅತಿಗೆ ಸೇರಿದ ಕಾರಣ ಕಷ್ಟ ಪಡುವವರಲ್ಲಿ ಪ್ರತಿಯೊಬ್ಬರೂ ಅಲ್ಲಾಹನ ವಿವಿಧ ಗುಣ ವಿಶೇಷಗಳನ್ನು ಮುಂದಿರಿಸಿ ಪ್ರಾರ್ಥಿಸಬೇಕು. ಮತ್ತು ಕ್ಷಮೆ ಯಾಚಿಸಬೇಕು. ಹೀಗೆ ಮಾಡುವುದರಿಂದ ಜಮಾಅತಿನ ಕಷ್ಟಗಳು ನಿವಾರಿಸಲ್ಪಡುತ್ತವೆ".

ನಾವು ಒಂದು ಜಮಾಅತಿನಲ್ಲಿ ಪೋಣಿಸಲ್ಪಟ್ಟಿದ್ದೇವೆ ಎಂದು ವಾದಿಸುತ್ತೇವೆ. ಆದುದರಿಂದ, ನಾವು ನಮ್ಮೆಲ್ಲರ ಪರೀಕ್ಷೆಗಳನ್ನೂ ಕಷ್ಟಗಳನ್ನೂ ನಿವಾರಿಸಲು ಅಲ್ಲಾಹನೊಂದಿಗೆ ಸಾಮೂಹಿಕವಾಗಿ ಪ್ರಾರ್ಥಿಸುವ ಆವಶ್ಯಕತೆ ಇದೆ. ನಮ್ಮ ಸ್ವಂತ ಕಷ್ಟಗಳ ಬಗ್ಗೆ ಪ್ರಾರ್ಥಿಸುವ ಹಾಗೆಯೇ ಜಮಾಅತಿಗೆ ಸಂಭವಿಸುವ ಕಷ್ಟಗಳ ನಿವಾರಣೆಗೋಸ್ಕರ ಸಹ ಹೃತ್ಪೂರ್ವಕವಾಗಿ ಪ್ರಾರ್ಥಿಸುವುದು ಆವಶ್ಯಕವಾಗಿದೆ.

ನಾನು ಹಿಂದೆ ನಿರ್ದೇಶಿಸಿದ ಹಾಗೆ ಜಮಾಅತಿನ ಅಭಿವೃದ್ಧಿಗಾಗಿ ಮತ್ತು ಪರಿಸ್ಥಿತಿಗಳು ಉತ್ತಮವಾಗಿ ಬದಲಾಯಿಸಲ್ಪಡಲು ಎರಡು ರಕ್‌ಅತ್ ನಫ್ಲ್ ನಮಾಝ್ ಅನುಷ್ಠಿಸಬೇಕು. ಹಾಗೆ ಅನುಷ್ಠಿಸುವುದಾಗಿ ಬಹುತೇಕ ಜನರು ನನಗೆ ಬರೆಯುತ್ತಿದ್ದಾರೆ. ಹೀಗೆ ನಮಾಝ್ ಮಾಡುವಾಗ ಬಹಳ ನೋವಿನಿಂದ ಪ್ರಾರ್ಥಿಸಿರಿ.

ನಾವು ನಮ್ಮ ಕೆಲಸಗಳನ್ನು ಅಲ್ಲಾಹನ ಸಂಪ್ರೀತಿ ಗಳಿಸಲಿಕ್ಕೋಸ್ಕರ ಮಾಡುವುದು ಆವಶ್ಯಕವಾಗಿದೆ. ನಾವು ಹಾಗೆ ಮಾಡಿದರೆ ನಮ್ಮ ಪ್ರಾರ್ಥನೆಗಳು ಅಂಗೀಕರಿಸಲ್ಪಡಲು ಅದು ಬಹಳ ಸಹಾಯಕವಾಗುತ್ತವೆ. ಜಮಾಅತಿಗೆ ಸಂಭವಿಸುವ ಕಷ್ಟ ಮತ್ತು ದುಃಖಗಳನ್ನು ನಮಗೆ ಸಂಭವಿಸಿದ ಕಷ್ಟ ಮತ್ತು ದುಃಖಗಳೆಂದು ಪರಿಗಣಿಸಿ ಬಹಳ ಅಳಲಿನೊಂದಿಗೂ ವಿನಯದೊಂದಿಗೂ ಅವುಗಳನ್ನು ದೂರಸರಿಸಲು ಅಲ್ಲಾಹನ ಸನ್ನಿಧಿಯಲ್ಲಿ ಪ್ರಾರ್ಥಿಸುವುದು ಆವಶ್ಯಕವಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನಮ್ಮ ದುಆಗಳು ಸ್ವೀಕರಿಸಲ್ಪಡುವಂತಾಗಲು ನಾವು ನಮ್ಮ ಕರ್ಮಗಳನ್ನು ಸರಿಪಡಿಸಬೇಕಾದುದು ಸಹ ಅತೀ ಅಗತ್ಯವಾಗಿದೆ. ದುಷ್ಕರ್ಮಗಳಿಂದ ದೂರ ಸರಿಯದೆ ಇದ್ದಲ್ಲಿ ಹಾಗೂ ಅಲ್ಲಾಹನು ನಿಶ್ಚಯಿಸಿದ ಪರಿಧಿಗಳನ್ನು ಉಲ್ಲಂಘನೆ ಮಾಡುತ್ತಾ ಇರುವುದಾದರೆ ಅಂತಹವರ ಪ್ರಾರ್ಥನೆಗಳು ಸ್ವೀಕರಿಸಲ್ಪಡಲಾರದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಇಚ್ಛೆ ಪ್ರಕಾರ ನಮ್ಮ ಜೀವಿತದಲ್ಲಿ ಪರಿಶುದ್ಧ ಬದಲಾವಣೆ ಉಂಟುಮಾಡುತ್ತಾ ನಮ್ಮ ಎಲ್ಲಾ ಕೆಲಸಗಳನ್ನು ಅಲ್ಲಾಹನ ಸಂಪ್ರೀತಿಗೋಸ್ಕರವಾಗಿ ಮಾಡುವ ಭಾಗ್ಯ ಅಲ್ಲಾಹನು ನಮಗೆ ದಯಪಾಲಿಸುವವನಾಗಲಿ. ಅದಕ್ಕೋಸ್ಕರ ನಾವು ಯಾವಾಗಲೂ ಪ್ರಯತ್ನ ಮಾಡುತ್ತಾ ಇರುವವರಾಗಬೇಕು. ನಾವು ಅಲ್ಲಾಹನೊಂದಿಗೆ ಹೃತ್ಪೂರ್ವಕವಾಗಿ ಪ್ರಾರ್ಥಿಸುವವರಾಗಬೇಕು. ನಮ್ಮ ಸ್ವಂತ ಕಷ್ಟಗಳ ನಿವಾರಣೆಗೋಸ್ಕರ ಅಳಲಿನೊಂದಿಗೆ ಪ್ರಾರ್ಥಿಸುವ ಹಾಗೆ ಜಮಾಅತಿನ ಸಂಕಷ್ಟಗಳ ನಿವಾರಣೆಗೋಸ್ಕರ ಸಹ ನಾವು ಪ್ರಾರ್ಥಿಸುವವರಾಗಬೇಕು. ಶತ್ರುಗಳ ಕೇಡುಕುಗಳಿಂದ ಸಂರಕ್ಷಿಸಲ್ಪಡಲು ನಾವು ಐಕ್ಯತೆಯೊಂದಿಗೆ ಪ್ರಾರ್ಥಿಸುವವರಾಗಬೇಕು. ಅಲ್ಲಾಹನು ಆ ಭಾಗ್ಯವನ್ನು ನಮಗೆ ಕರುಣಿಸಲಿ.

ನಾನು ಮೊದಲು ಹೇಳಿದ ಹಾಗೆ ನಾವೆಲ್ಲರೂ ಸಾಮೂಹಿಕವಾಗಿ ನಿಷ್ಠೆಯಿಂದ ಅಲ್ಲಾಹನೊಂದಿಗೆ ಜಮಾಅತಿನ ಸಂಕಷ್ಟಗಳನ್ನು ನಿವಾರಿಸಲು ಪ್ರಾರ್ಥಿಸುತ್ತಾ ಬಾಗುತ್ತಾ ಇರದಿದ್ದರೆ ನಾವು ನಮ್ಮ ಉದ್ದೇಶಲಕ್ಷ್ಯಗಳನ್ನು ಗಳಿಸಲಾರೆವು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿದ ನಾವು ಜಮಾಅತಿನ ಕಷ್ಟಗಳ ನಿವಾರಣೆಗೋಸ್ಕರ ಸಹಭಾಗಿತ್ವದಿಂದ ಪ್ರಾರ್ಥಿಸಿದರೆ ನಮ್ಮ ಸ್ವಂತ ಕಷ್ಟಗಳು ಸಹ ನಿವಾರಿಸಲ್ಪಡುವುವು. ಒಬ್ಬ ಮನುಷ್ಯ ಇನ್ನೊಬ್ಬನಿಗೋಸ್ಕರ ಪ್ರಾರ್ಥಿಸುವಾಗ ದೇವದೂತರು(ಮಲಾಯಿಕ್) ಅವನಿಗೋಸ್ಕರ ಪ್ರಾರ್ಥಿಸುವರು. ಪ್ರಾರ್ಥನೆ ಸಹಭಾಗಿತ್ವದಿಂದ ಕೂಡಿದರೆ ಗವಿಗೆ ಅಡ್ಡವಾಗಿ ಬಿದ್ದ ಬಂಡೆಕಲ್ಲು ಸಹ ದೂರ ಸರಿಸಲ್ಪಡುತ್ತದೆ. ಆದುದರಿಂದ ಯಾವುದೇ ಅಹ್ಮದಿ ವ್ಯಕ್ತಿ "ನಾನು ಸುಖವಾಗಿದ್ದೇನೆ, ಎಲ್ಲವೂ ಸರಿಯಾಗಿದೆ" ಎಂದು ಭಾವಿಸಬಾರದು. ಲೋಕದ ಯಾವುದೇ ಮೂಲೆಯಲ್ಲಿ ವಾಸಿಸುವ ಅಹ್ಮದಿಯ ಕಷ್ಟ ನಮ್ಮೆಲ್ಲರ ಕಷ್ಟವಾಗಿದೆ. ಇಂತಹ ಭಾವನೆ ನಮ್ಮಲ್ಲಿ ಉಂಟಾಗಬೇಕು. ಇದಕ್ಕೋಸ್ಕರ ನಾವು ಪ್ರಾರ್ಥಿಸಬೇಕು. ಕೇವಲ ಭಾವನೆ ಮಾತ್ರ ಇದ್ದರೆ ಸಾಲದು. ನಾವು ಕಾರ್ಯೋನ್ಮುಖರಾಗಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೀಗೆ ಹೇಳಿದ್ದಾರೆ: "ದುಆ ಎಂಬ ಈ ಆಯುಧ ನಮಗೆ ಜಯವನ್ನು ಗಳಿಸಿಕೊಡುವುದು. ಆದರೆ ನಾವು ನೆನಪಿಟ್ಟುಕೊಳ್ಳಬೇಕಾದ ಒಂದು ಮುಖ್ಯ ಸಂಗತಿಯೇನೆಂದರೆ, ನಾವು ಭಾವೋದ್ವೇಗದಿಂದ ನಮ್ಮ ಶತ್ರುಗಳ ವಿರುದ್ಧ 'ಅವರ ಮೇಲೆ ವಿಪತ್ತು ಮತ್ತು ಶಿಕ್ಷೆ ಬಂದೆರಗಲಿ' ಎಂದು ಪ್ರಾಥಿಸಬಾರದು. ಅದಕ್ಕೆ ಬದಲಾಗಿ ಹೀಗೆ ಪ್ರಾರ್ಥಿಸಬೇಕು: ಓ ಅಲ್ಲಾಹ್, ನಮ್ಮಿಂದ ಪರೀಕ್ಷೆಗಳನ್ನೂ ಕಷ್ಟಗಳನ್ನೂ ದೂರಸರಿಸಲು ನಿನ್ನನ್ನು ಪ್ರಾರ್ಥಿಸುತ್ತೇವೆ. ಈ ಕಷ್ಟಗಳು ಕೊನೆಗೊಳ್ಳಲಿ ಎಂದು ನಾವು ನಿನ್ನನ್ನು ಬೇಡಿಕೊಳ್ಳುತ್ತೇವೆ. ಓ ಅಲ್ಲಾಹ್, ನಾವು ನಮ್ಮ ವಿರೋಧಿಗಳ ನಾಶವನ್ನು ಇಚ್ಛಿಸುವುದಿಲ್ಲ. ನಾವು ಅವರು ಉತ್ತಮರಾಗಲಿ ಎಂದು ಬಯಸುತ್ತೇವೆ. ಬಲಹೀನರಾದ ನಮ್ಮನ್ನು ನಿನ್ನ ಅನುಗ್ರಹಗಳು ಆವರಿಸಿವೆ. ನಾವು ಕಠಿಣವಾದ ಸ್ಥಿತಿಯಲ್ಲಿದ್ದರೂ ನಿನ್ನ ಅನುಗ್ರಹಗಳ ದೃಶ್ಯಗಳನ್ನು ಸಹ ಕಾಣುತ್ತಾ ಇರುತ್ತೇವೆ. ನೀನು ಆ ಜನರಿಗೆ ಸಹ ಅನುಗ್ರಹವನ್ನು ಆವರಿಸಿದರೆ ಮತ್ತು ಅವರಿಗೆ ಮಾರ್ಗದರ್ಶನ ನೀಡಿದರೆ ಅದು ನಮಗೂ ಅವರಿಗೂ ಬಹಳ ದೊಡ್ಡ ಅದೃಷ್ಟವಾಗುವುದು. ಆದರೆ ನಿನ್ನ ಜ್ಞಾನ ಅವರ ಪೈಕಿ ಕೆಲವರನ್ನು ಅನುಗ್ರಹಗಳಿಗೆ ಅನರ್ಹರಾಗಿ ಕಾಣುವುದಾದರೆ ಮತ್ತು ಅವರ ನಾಶ ಉತ್ತಮವೆಂದು ಗಣಿಸುವುದಾದರೆ ನೀನು ಅವರನ್ನು ನಮ್ಮ ಮಾರ್ಗದಿಂದ ದೂರ ಸರಿಸು. ಇಸ್ಲಾಮ್ ಧರ್ಮದ ಪ್ರಗತಿಯನ್ನು ಈಗ ನೈಜ ಇಸ್ಲಾಮ್ ಆಗಿರುವ ಅಹ್ಮದಿಯ್ಯತ್‌ನೊಂದಿಗೆ ನೀನು ಜೋಡಿಸಿರುವುದರಿಂದ ಅವರ ಇರುವಿಕೆ ಇದಕ್ಕೆ ತಡೆಯಾಗದಿರಲು ನೀನು ಅವರನ್ನು ದೂರ ಸರಿಸು".

ಈ ರೀತಿ ಅಲ್ಲಾಹನನ್ನು ಬೇಡಿಕೊಂಡರೆ ಅಲ್ಲಾಹನು ತನ್ನ ಜಾಣ್ಮೆಗೆ ಅನುಸಾರವಾಗಿ ಅದನ್ನು ಈಡೇರಿಸುವನು. ನಾವು ಮೇಲೆ ವಿವರಿಸಿದ ರೀತಿಯಲ್ಲಿ ಅಲ್ಲಾಹನನ್ನು ಬೇಡಿಕೊಳ್ಳಬೇಕು. ಕೇವಲ ಶತ್ರುಗಳ ನಾಶಕ್ಕೋಸ್ಕರ ಪ್ರಾರ್ಥಿಸಬಾರದು. ನಾವು ದುಆಗಳನ್ನು ಸರಿಯಾದ ರೀತಿಯಲ್ಲಿ ಮಾಡಲು ಅಲ್ಲಾಹನು ನಮಗೆ ಭಾಗ್ಯವನ್ನು ದಯಪಾಲಿಸಲಿ– ಆಮೀನ್.

---------------*****---------------

*Friday Sermon delivered by Hadrath Khaleefatul Masih Al Khamis*(atba)

*at Masjid Baithul Futhuh, London on 08-08-2014.*

Summarized by *Nazarath Nashr-O-Isha'ath, Qadian*

***Kannada Translation:*** M. Ubeidullah for Kannada Desk, Qadian

***Reviewed by:*** M P Ibrahim | ***Typing:*** U Basheer Ahmad

*Published By:* **Kannada Isha'at Team,** *Ahmadiyya Muslim Jama`at, Karnataka*

*Email*: **khutuba.kannada@gmail.com**